ವಿಷಯ :- ಮಂಗಳೂರು ನಾಮಾಂಕಿತ ಐ.ಟಿ.ಐ ನಲ್ಲಿ ಅಧ್ಯಾಪಕ ಮತ್ತು ಸಿಬ್ಬಂದಿಯ ನೇಮಕಾತಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2307 (2122)

ಶ್ರೀ ಎಸ್. ಯೋಗೇಶ್ ಭಟ್ :- ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಂಗಳೂರು ನಾಮಾಂಕಿತ ಐ.ಟಿ.ಐ. ತಾಂತ್ರಿಕ ಶಿಕ್ಷಣ ಸಂಸ್ಥೆಯಲ್ಲಿ ಅಧ್ಯಾಪಕ ಹಾಗೂ ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ನೇಮಕಾತಿಯನ್ನು ಮಾಡದಿರಲು ಕಾರಣವೇನು?

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) :-

ಅ) ಹೌದು,

ಸರ್ಕಾರದ ಆರ್ಥಿಕ ಮಿತವ್ಯಯ ಜಾರಿಯಲ್ಲಿರುವುದರಿಂದ ನೇಮಕಾತಿ ಮಾಡಿಕೊಳ್ಳಲು ಸಾಧ್ಯವಾಗಿರುವುದಿಲ್ಲ. ಆದರೂ ಈ ವರ್ಷ ಅರ್ಹ ಅಭ್ಯರ್ಥಿಗಳನ್ನು ನೇಮಕಾತಿ ಮಾಡಲು ಪ್ರಯತ್ನಿಸಲಾಗುತ್ತಿದೆ.

ವಿಷಯ :- ತುರುವೇಕೆರೆ ತಾಲ್ಲೂಕಿನಲ್ಲಿ ತೆಂಗು ಬೆಳೆಗೆ ರೋಗ.

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2309 (2934)

ಶ್ರೀ ಹೆಚ್. ಬಿ. ನಂಜೇಗೌಡ (ತುರುವೇಕೆರೆ) :- ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತುರುವೆಕೆರೆ ತಾಲ್ಲೂಕಿನಲ್ಲಿ ತೆಂಗಿನ ಬೆಳೆಗೆ ತಗುಲಿರುವ ಅಣಬೆ ರೋಗ ಹಾಗೂ ಕಪ್ಪು ತಲೆ ಹುಳುಗಳ ರೋಗ ತಗುಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಅವುಗಳ ನಿವಾರಣೋಪಾಯವಾಗಿ ತೆಗೆದುಕೊಂಡ ಕ್ರಮಗಳೇನು?

ಇ) ಈ ರೋಗದಿಂದ ನಾಶವಾದ ತೋಟದ ಬೆಳೆಗಾರರಿಗೆ ಯಾವ ರೀತಿಯ ಪರಿಹಾರ ನೀಡಲಾಗುವುದು ಹಾಗೂ ಅದರ ಪ್ರಮಾಣವೇನು?

ಶ್ರೀ ಡಿ. ಬಿ. ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು) :-

ಅ) ಹೌದು.

ಆ) ಈ ತಾಲ್ಲೂಕಿನ ರೋಗ ಪೀಡಿತ ಹಲವಾರು ಗ್ರಾಮಗಳಿಗೆ ಸಸ್ಯ ಸಂರಕ್ಷಣೆ ವಿಭಾಗದ ಇಲಾಖಾಧಿಕಾರಿಗಳು ವ್ಯಾಪಕ ಪ್ರವಾಸ ಕೈಗೊಂಡು ರೋಗದ ತೀವ್ರತೆಯನ್ನು ಪರಿಶೀಲಿಸಿರುತ್ತಾರೆ. ರೋಗ ನಿಯಂತ್ರಣಕ್ಕೆ ರೈತರಿಗೆ ಅಗತ್ಯ ತಾಂತ್ರಿಕ ಸಲಹೆ ನೀಡಲಾಗಿದೆ. 1995-96 ನೇ ಸಾಲಿನಲ್ಲಿ ಅಡಿಕೆ ಮತ್ತು ತೆಂಗಿನ ರೋಗ ನಿಯಂತ್ರಣಕ್ಕೆ ಜಿಲ್ಲಾ ವಲಯ ಯೋಜನೆಯ ರೂ. 1.00 ಲಕ್ಷ ಅನುದಾನವಿದ್ದು, ಇದರ ಜೊತೆಗೆ ಇತರ ಯೋಜನೆಗಳಲ್ಲಿನ